ಕರ್ನಾಟಕ ಸರ್ಕಾರ
**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಇತರೆ ಪರೀಕ್ಷೆಗಳು**
ಮಲ್ಲೇಶ್ವರಂ 6ನೇ ಅಡ್ಡರಸ್ತೆ, ಬೆಂಗಳೂರು–560003
E-Mail Id: adpiqsection@gmail.com Phone No: 080-23460525

ಸಂಖ್ಯೆ: ಕ್ಯೂ3/ಡಿಪಿಎಸ್ಇ/ಡಿ. ಅಂಪಟ್ಟಿ/05/2020–21 ದಿನಾಂಕ: 06.11.2021

## ಸುತ್ತೋಲೆ

**ವಿಷಯ:**–2019–20 ನೇ ಸಾಲಿನಲ್ಲಿ ಡಿಪ್ಲೋಮಾ ಇನ್ ಪ್ರಿ–ಸ್ಕೂಲ್ಎಜುಕೇಷನ್(ಡಿ.ಪಿ.ಎಸ್.ಇ) ಪರೀಕ್ಷೆಯಲ್ಲಿ ಉತ್ತೀರ್ಣರಾದ ಪ್ರಥಮ ವರ್ಷದ ಪ್ರಶಿಕ್ಷಣಾರ್ಥಿಗಳಿಗೆ ಡಿಜಿಟಲ್ಅಂಕಪಟ್ಟಿಗಳನ್ನು ಆನ್‌ಲೈನ್ ಮೂಲಕ ವಿತರಿಸುವ ಬಗ್ಗೆ.

ಉಲ್ಲೇಖ:–ಸರ್ಕಾರಿ ಆದೇಶ ಸಂಖ್ಯೆ:ಇಡಿ 80 ಮಾಹಿತಿ 2021,ಬೆಂಗಳೂರು, ದಿನಾಂಕ:05.07.2021.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2019–20 ನೇ ಸಾಲಿನಲ್ಲಿ ಪ್ರಥಮ ವರ್ಷದ ಡಿಪ್ಲೋಮಾ ಇನ್ ಪ್ರಿ–ಸ್ಕೂಲ್ಎಜುಕೇಷನ್(ಡಿ.ಪಿ.ಎಸ್.ಇ) ಪರೀಕ್ಷೆಯಲ್ಲಿ ಉತ್ತೀರ್ಣರಾದ 33 ಪ್ರಶಿಕ್ಷಣಾರ್ಥಿಗಳಿಗೆ ಆನ್‌ಲೈನ್ ಮೂಲಕ DIGITALLY SIGNED ಅಂಕಪಟ್ಟಿಯನ್ನು ವಿತರಿಸಲು ಉಲ್ಲೇಖಿತ ಪತ್ರದಲ್ಲಿ ಆದೇಶಿಸಿದೆ.

**ಆನ್‌ಲೈನ್ ಮೂಲಕ ಅಭ್ಯರ್ಥಿಗಳು ಅಂಕಪಟ್ಟಿಯನ್ನು ಪಡೆಯುವ ವಿಧಾನ**

- ಪ್ರಥಮ ವರ್ಷದ ಡಿ.ಪಿ.ಎಸ್.ಇ ಪರೀಕ್ಷೆಯಲ್ಲಿ ಉತ್ತೀರ್ಣರಾದ 33 ಪ್ರಶಿಕ್ಷಣಾರ್ಥಿಗಳು DIGITALLY SIGNED ಅಂಕಪಟ್ಟಿಯನ್ನು ಡೌನ್‌ಲೋಡ್ ಮಾಡಿಕೊಳ್ಳುವ ಸಂಬಂಧ ಅಭ್ಯರ್ಥಿಗಳ ನೊಂದಾಯಿತ ಮೊಬೈಲ್ ಸಂಖ್ಯೆಗೆ ಎಸ್ಎಂಎಸ್ ಮೂಲಕ ಮಾಹಿತಿ ರವಾನಿಸಲಾಗುವುದು.
- ಈ ಎಸ್ಎಂಎಸ್ ನಲ್ಲಿ ಅಭ್ಯರ್ಥಿಗಳು ಅಂಕಪಟ್ಟಿಯನ್ನು ಡೌನ್‌ಲೊಡ್ ಮಾಡಿಕೊಳ್ಳಲು ಲಿಂಕನ್ನು ನೀಡಲಾಗುವುದು.
- ಲಿಂಕ್ಅನ್ನು ಕ್ಲಿಕ್ ಮಾಡಿದಾಗ ಅಭ್ಯರ್ಥಿಗಳಿಗೆ Front end screen ಪ್ರದರ್ಶಿತವಾಗುತ್ತದೆ.
- Front end screen ನಲ್ಲಿ ಅಭ್ಯರ್ಥಿಗಳು ತಮ್ಮ ನೋಂದಣಿ ಸಂಖ್ಯೆ, ತಮ್ಮ ಹೆಸರಿನ ಪ್ರಾರಂಭಿಕ ಮೂರು ಅಕ್ಷರಗಳು (English Capital Letters) ಹಾಗೂ ಜನ್ಮ ದಿನಾಂಕ (DD/MM/YYYY) ವನ್ನು ಅಭ್ಯರ್ಥಿಯ ಪ್ರವೇಶ ಪತ್ರದಲ್ಲಿರುವಂತೆ ನಮೂದಿಸಿ ಅಂಕಪಟ್ಟಿಯನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು.
- ಅಭ್ಯರ್ಥಿಯು ಅಂಕಪಟ್ಟಿಯನ್ನು ಆನ್‌ಲೈನ್ ಮೂಲಕ ಪಡೆಯಲು ಅಂಕಪಟ್ಟಿ ಪ್ರಕಟಿಸಿದ

3 ತಿಂಗಳ ಒಳಗೆ ಪಡೆಯಲು ಕಾಲಾವಕಾಶವನ್ನು ಕಲ್ಪಿಸಲಾಗುತ್ತದೆ. ತದನಂತರ ಲಿಂಕ್‌ಅನ್ನು ನಿಷ್ಕ್ರಿಯಗೊಳಿಸಲಾಗುವುದು.

- 3 ತಿಂಗಳ ನಂತರ ಅಭ್ಯರ್ಥಿಗಳಿಗೆ ಮತ್ತೊಮ್ಮೆ ಅಂಕಪಟ್ಟಿ ಪಡೆಯುವ ಅವಶ್ಯಕತೆ ಉಂಟಾದಲ್ಲಿ ಮಂಡಳಿಯನ್ನು ಸಂಪರ್ಕಿಸಿ ನಿಯಮಾನುಸಾರ ಅಂಕಪಟ್ಟಿಯ ಪ್ರತಿಯನ್ನು ಪಡೆಯಬಹುದು.
- ಡೌನ್‌ಲೋಡ್ ಮಾಡಿಕೊಂಡ ಅಂಕಪಟ್ಟಿಯಲ್ಲಿ ಅಭ್ಯರ್ಥಿಯ ಹೆಸರು, ತಂದೆ, ತಾಯಿಯ ಹೆಸರು ತಿದ್ದುಪಡಿ ಆಗ ಬೇಕಾದಲ್ಲಿ ಅಗತ್ಯ ದಾಖಲೆಗಳೊಂದಿಗೆ ಅಂಕಪಟ್ಟಿ ಪಡೆದ 15 ದಿನಗಳೊಳಗಾಗಿ ಪ್ರಸ್ತಾವನೆಯನ್ನು ಸಂಸ್ಥೆಯ ಮುಖ್ಯಸ್ಥರು ಡಯಟ್ ಪ್ರಾಂಶುಪಾಲರ ಮುಖಾಂತರ ಸಲ್ಲಿಸಬಹುದು.

G.S 8/11/2021

(ಎಸ್.ಗೀತಾ)
ನಿರ್ದೇಶಕರು
(ಇತರೆ ಪರೀಕ್ಷೆಗಳು)

ಪ್ರತಿಯನ್ನು:

1. ನಿರ್ದೇಶಕರು, ಡಿ.ಎಸ್.ಇ.ಆರ್.ಟಿ ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಸಂಬಂಧಿಸಿದ ಡಯಟ್ ಪ್ರಾಂಶುಪಾಲರಿಗೆ ಅಗತ್ಯ ಮಾಹಿತಿಗಾಗಿ.
3. ಪ್ರಾಂಶುಪಾಲರು ಟಿಟಿಐ ಕಾಲೇಜು, ಹೊಸದುರ್ಗ/ GTW ಕಲಬುರಗಿ ರವರು ಅಭ್ಯರ್ಥಿಗಳಿಗೆ ಆನ್‌ಲೈನ್ ಅಂಕಪಟ್ಟಿ ಪಡೆಯುವಲ್ಲಿ ಸೂಕ್ತ ಮಾರ್ಗದರ್ಶನ ಹಾಗೂ ತಿಳುವಳಿಕೆ ನೀಡುವುದು.
4. ಕಛೇರಿ ಪ್ರತಿ.